1	2	3	4	5
6.	ಚಿಕ್ಕಮಗಳೂರು	5251	38756	44007
7.	ಚಿತ್ರದುರ್ಗ	9077	80564	89641
8.	ದಕ್ಷಿಣ ಕನ್ನಡ	11499	60708	72207
9.	ಧಾರವಾಡ	12834	118455	131289
10.	ಗುಲ್ಬರ್ಗ	8814	74122	82936
11.	ಹಾಸನ	6680	72507	79187
12.	ಕೊಡಗು	1545	13554	15099
13.	ಕೋಲಾರ	5541	73664	79205
14.	ಮಂಡ್ಯ	5477	48426	53903
15.	ಮೈಸೂರು	12229	92897	105126
16.	ರಾಯಚೂರು	7599	64609	72208
17.	ಶಿವಮೊಗ್ಗ	11285	78491	89776
18.	ತುಮಕೂರು	8284	95180	103464
19.	ಉತ್ತರ ಕನ್ನಡ	6494	44796	51290
	ಒಟ್ಟು ಮೊತ್ತ	**186223**	**1632612**	**1818835**

ಹಾಸನ ವಿಭಾಗದ ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ಅಭಿವೃದ್ಧಿಗೆ ಒದಗಿಸಿದ ಹಣ

1774 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ವಿಭಾಗ ಲೋಕೋಪಯೋಗಿ ಇಲಾಖೆಯಲ್ಲಿ 1997-98ರ ಸಾಲಿಗೆ ರಸ್ತೆ ಅಭಿವೃದ್ಧಿಗೆ ಯೋಜನೇತರದಲ್ಲಿ ಒದಗಿಸಿದ ಆಯವ್ಯಯದ ಹಣವೆಷ್ಟು? (ಮಳೆ ಹಾನಿಯ ರಸ್ತೆಯನ್ನು ಸೇರಿ)

ಆ) 1997-98ರ ಪ್ರಗತಿ ಎಷ್ಟು?

ಇ) 1997-98ರಲ್ಲಿ ಬಿಡುಗಡೆಯಾಗಿರುವ ಹಣವೆಷ್ಟು?

ಈ) ಮಳೆ ಹಾನಿಯಲ್ಲಿ ಹಾಳಾಗಿರುವ ರಸ್ತೆಗೆ ಮಂಜೂರಾತಿಯಾಗಿರುವ ಹಣವೆಷ್ಟು? ಪ್ರಗತಿಯೆಷ್ಟು? ಬಿಡುಗಡೆ ಯಾಗಿರುವ ಹಣವೆಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆ 1997-98ನೇ ಸಾಲಿನಲ್ಲಿ ಯೋಜನೇತರ ಅಡಿಯಲ್ಲಿ ಒದಗಿಸಿದ (ಮಳೆ ಹಾನಿ ರಸ್ತೆ ಸೇರಿ) 549.65 ಲಕ್ಷ ರೂ.ಗಳು

ಆ) 1997-98ನೇ ಸಾಲಿನ ಪ್ರಗತಿ 297.13 ಲಕ್ಷ ರೂ.ಗಳು

ಇ) 1997-98ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಹಣ 228.78 ಲಕ್ಷ ರೂ.ಗಳು

ಈ) ಮಳೆ ಹಾನಿಯಿಂದ ಹಾಳಾಗಿರುವ ರಸ್ತೆಗೆ ಮಂಜೂರಾದ ಹಣ 170.125 ಲಕ್ಷ ರೂ.ಗಳು. ಪ್ರಗತಿ 39.00 ಲಕ್ಷ ರೂ.ಗಳು ಬಿಡುಗಡೆಯಾಗಿರುವ ಹಣ ಇಲ್ಲ.

ರಾಜ್ಯದಲ್ಲಿ ನಿರುದ್ಯೋಗಿ ಅಭ್ಯರ್ಥಿಗಳು

1775 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನಿರುದ್ಯೋಗಿ ಅಭ್ಯರ್ಥಿಗಳ ದಾಖಲಾತಿ ಮಾಡುವಾಗ ಸಾಮಾನ್ಯ ವಿದ್ಯಾರ್ಹತೆ (ಎಸ್.ಎಸ್.ಎಲ್.ಸಿ. ಯಿಂದ ಡಿಗ್ರಿ) ಮತ್ತು ವೃತ್ತಿಪರ ವಿದ್ಯಾರ್ಹತೆ (ಬಿ.ಎಡ್ ಪೋಸ್ಟ್ ಗ್ರಾಜುಯೇಷನ್ ಆರ್ ಟೆಕ್‌ನಿಕಲ್ ಎಜುಕೇಷನ್) ಹೊಂದಿರುವ ಅಭ್ಯರ್ಥಿಗಳ ವಿವರಗಳನ್ನು ಬೇರೆ ಬೇರೆಯಾಗಿ ಚಾಲ್ತಿ ದಾಖಲೆಯನ್ನು ನಿರ್ವಹಿಸುವುದು ಸಮಂಜಸವಲ್ಲವೆ. ಈ ಬಗ್ಗೆ ಉದ್ಯೋಗ ವಿನಿಮಯ ಕೇಂದ್ರಗಳಿಗೆ ನೀಡಿರುವ ಸುತ್ತೋಲೆಗಳ ವಿವರ ನೀಡುವುದು?

ಆ) ವೃತ್ತಿಪರ ವಿದ್ಯಾರ್ಹತೆ ಹೊಂದಿದ ನಿರುದ್ಯೋಗಿಗಳು ರಾಜ್ಯ ಮಟ್ಟದ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿಯನ್ನು ಮಾಡಬೇಕಾಗಿರುವುದು ನಿಜವಲ್ಲವೆ. ಇಲ್ಲವಾದಲ್ಲಿ ಯಾವಾಗಿನಿಂದ ಸದರಿ ಕ್ರಮ ಕೈಬಿಡಲಾಗಿದೆ? (ವಿವರ ನೀಡುವುದು).

ಇ) ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯ ಉದ್ಯೋಗಾವಕಾಶಕ್ಕೆ ವೃತ್ತಿಪರ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಕಾರವಾರ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದವರು ಕಳುಹಿಸಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ವಿವರ ನೀಡುವುದು?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ಸೂಕ್ತ

ಆ) ನಿಜ.

ಇ) ಹೌದು. ಕಾರವಾರ ಯೋಜನಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ 1-4-97 ರಿಂದ 31-3-98ರ ವರೆಗೆ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಗೆ 79 ಬೇಡಿಕೆಗಳು ಅಭ್ಯರ್ಥಿಗಳ